"ಪಾಪ..." ಎಂದು, ಏನೋ ಯೋಚಿಸಿದವನಂತೆ ನಟಿಸಿ, "ಒಂದು ಕೆಲಸ ಮಾಡೋಣ, ನೀವಿಬ್ಬರು ಇಲ್ಲೇ ಇರಿ, ನಿಮ್ಮ ಬದಲು ನಾನು ನಾಗಕ್ಕನಿಗೆ ಕಾರಂಜಿ ತೋರಿಸಿ ಕರ್ಕೊಂಡು ಬರ್ತೇನೆ. ಐಸ್ ಕ್ರೀಂ ಖಾಲಿ ಆದ್ರೆ, ಇದನ್ನು ತಿನ್ನುತ್ತಾ ಇರಿ" ಎನ್ನುತ್ತಾ ಜೇಬಿನಿಂದ ಚಾಕಲೇಟು ಬಾರ್‌ಗಳನ್ನು ತೆಗೆದುಕೊಟ್ಟ.

"ಆಯ್ತಣ್ಣ, ನಾವಲ್ಲೇ ಜಾರುಬಂಡೆಯಲ್ಲಿ ಆಡ್ತಾ ಇರ್ತೀವಿ" ಎನ್ನುತ್ತಾ ಚಾಕಲೇಟ್ ತೆಗೆದುಕೊಂಡು ಇಬ್ಬರೂ ಖುಷಿಯಿಂದ ಜಾರುಬಂಡೆಯ ಕಡೆ ಓಡಿದರು.

ಕೃಷ್ಣಪ್ಪಣ್ಣನ ಮಗನ ಒತ್ತಾಯಕ್ಕೆ ಅವರ ಮನೆಯ ದರ್ಶನಕ್ಕೆ ಹೋಗಿದ್ದ ಮಹೇಶ ಅಪ್ಪಟ ನಾಸ್ತಿಕ. ಹಾಗಾಗಿ, ಪಾತ್ರಿ ನಾಗಕ್ಕ, ಅವನ ಕಣ್ಣಿಗೆ ಕೇವಲ ಹೆಣ್ಣಾಗಿ ಕಂಡಿದ್ದಳು. ಗೆಳೆತನ ನಿರಾಕರಿಸಿದರೂ ಲೆಕ್ಕಿಸದೇ ತಾನೇ ಮೈಮೇಲೆ ಬಿದ್ದು ಅವಳ ಪರಿಚಯ ಮಾಡಿಕೊಂಡಿದ್ದ.

ತಾಯಿಯ ದೆಸೆಯಿಂದಾಗಿ ದುಂಬಿಯ ಸನಿಹವಿಲ್ಲದ ಪುಷ್ಪದಂತಿದ್ದ ನಾಗಕ್ಕನಿಗೆ ದೇವರ ಸೇವೆ ಶುರು ಮಾಡಿಕೊಂಡ ಮೇಲಂತೂ ಓರಗೆಯ ವಯಸ್ಸಿನ ಹುಡುಗರು ಕೂಡ ಭಕ್ತಿಯಿಂದ ಕೈ ಮುಗಿಯತೊಡಗಿದ್ದರು. ಪೂಜೆಗೆಂದು ಊರೂರು ಸುತ್ತುವಾಗ ಮನೆ ಕಡೆ ಒಂದು ಹೆಣ್ಣು ಜೀವ ಬೇಕೆಂದು ನಾಗಕ್ಕನಿಗಿಂತಲೂ ಚಿಕ್ಕವನಾದ ಮಗ ಮಧುಕರನಿಗೆ ಕರಿಯಕ್ಕ ಮದುವೆ ಮಾಡಿಸಿದ್ದಳು.

